# IV ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ ಇವರ ನ್ಯಾಯಾಲಯದಲ್ಲಿ

## ಸತ್ರ ಮೊಕದ್ದಮೆ ನಂಃ40/2024

**ಉಪಸ್ಥಿತಿಃ-ಕೆ. ರಾಜೇಶ ಕರ್ಣಮ್**
ಬಿ.ಎಸ್ಸಿ. ಎಲ್.ಎಲ್.ಬಿ. ಎಲ್.ಎಲ್.ಎಂ.
IV ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ

**ಪಿರ್ಯಾದಿದಾರರು:** ಸರಕಾರದ ಪರವಾಗಿ ಇಲಕಲ್ಲ ಪೊಲೀಸ ಠಾಣೆ

***-V/s-***

**ಆರೋಪಿತರುಃ-** ಬಸಪ್ಪ ಭೀಮಪ್ಪ ಮಾದರ ಉರ್ಫ ಕರಡಿ ಹಾಗೂ ಇತರರು

9. ಭೀಮಪ್ಪ ದುರಗಪ್ಪ ಗೋನಾಳ
ವಯಾಃ 68 ವರ್ಷ, ಉದ್ಯೋಗ ನಿವೃತ್ತ ಎ.ಎಸ್.ಐ
ಸಾಃ ಇಲಕಲ್ಲ, ತಾಃಇಲಕಲ್ಲ, ಜಿಃಬಾಗಲಕೋಟೆ

## :ದೋಷಾರೋಪಣೆ:

***

ದಿನಾಂಕಃ22.06.2018 ರಂದು ಮಧ್ಯಾಹ್ನ 1.15 ಗಂಟೆ ಸುಮಾರಿಗೆ 9 ನೇ ಆರೋಪಿಯಾದ ನೀವು ಇತರ ಆರೋಪಿತರ ಜೊತೆ ಕೂಡಿ ಸಂಗಪ್ಪ ಜಯಬೀರಪ್ಪ ಹೂಲಗೇರಿ ಇವರ ಜಮೀನಿನಲ್ಲಿ ಆರೋಪಿ-2 ಪ್ರವೇಶ ಮಾಡಿದಾಗ ಬೆಳೆ ಹಾಳಾಗುತ್ತದೆ ಎಂದು ಹೇಳಿದ್ದರ ಕುರಿತು ತಂಟೆ ತೆಗೆದು ನಿಮ್ಮ ಸಾಮಾನ್ಯ ಉದ್ದೇಶ ಸಾಧನೆಗಾಗಿ ಎಲ್ಲ ಆರೋಪಿತರು ಸೇರಿ ತಂಟೆ ತೆಗೆದು ಅಪರಾಧ ಮಾಡುವ ಉದ್ದೇಶದಿಂದ ದೊಂಬಿ ಮಾಡಿದ್ದು, ಅದರಂತೆ ಭಾರತೀಯ ದಂಡ ಸಂಹಿತೆ ಕಲಂ.147 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದಾಗಿ ಈ ನ್ಯಾಯಾಲಯ ಸಂಜ್ಞೆ ತೆಗೆದುಕೊಂಡಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಾಮಾನ್ಯ ಉದ್ದೇಶ ಸಾಧನೆಗಾಗಿ ಎಲ್ಲ ಆರೋಪಿತರು ಸೇರಿ ತಂಟೆ ತೆಗೆದು ನಿಮ್ಮ ಚಿತಾವಣೆ ಮೇರೆಗೆ ಉಳಿದ ಆರೋಪಿತರು ಕೈ ಕಾಲುಗಳಿಂದ ಮನಸೋ ಇಚ್ಚಿ ದೂರುದಾರನ ತಾಯಿ, ಸೊಸೆ, ತಮ್ಮಂದಿರಿಗೆ ಹಲ್ಲೆ ಮಾಡಿದ್ದು, ಅದರಂತೆ ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದಾಗಿ ಈ ನ್ಯಾಯಾಲಯ ಸಂಜ್ಞೆ ತೆಗೆದುಕೊಂಡಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 9 ನೇ ಆರೋಪಿತರಾದ ನೀವು ನಿಮ್ಮ ಸಾಮಾನ್ಯ ಉದ್ದೇಶ ಸಾಧನೆಗಾಗಿ ಎಲ್ಲ ಆರೋಪಿತರು ಸೇರಿ ತಂಟೆ ತೆಗೆದು ಚಾಸಾ-4 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆಬಡೆ ಮಾಡಿ ಅವರ ಸೀರೆ ಹಿಡಿದು ಎಳೆದಾಡಿ ಮಹಿಳಾ ಗೌರವಕ್ಕೆ ದಕ್ಕೆ ಬರುವಂತೆ ನಡೆದುಕೊಂಡಿದ್ದು, ಅದರಂತೆ ಭಾರತೀಯ ದಂಡ ಸಂಹಿತೆ ಕಲಂ.354-ಬಿ ಸಹವಾಚಕ ಕಲಂ.149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದಾಗಿ ಈ ನ್ಯಾಯಾಲಯ ಸಂಜ್ಞೆ ತೆಗೆದುಕೊಂಡಿದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಸಾಮಾನ್ಯ ಉದ್ದೇಶ ಸಾಧನೆಗಾಗಿ ಚಾಸಾ-9 ರವರಿಗೆ "ಲೇ ಸಂಗ್ಯಾ ಕುರುಬ ಸೂಳೇಮಗನಾ ಇಲ್ಲಿ ಮೇವು ಕೀಳಬೇಡಾ ಅಂತಿಯಾ ರಂಡಿ ಮಗನಾ" ಅಂತಾ ಎಲ್ಲರೂ ಸೇರಿ ಬೈದಿದ್ದು, ಅದರಂತೆ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದಾಗಿ ಈ ನ್ಯಾಯಾಲಯ ಸಂಜ್ಞೆ ತೆಗೆದುಕೊಂಡಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಸಾಮಾನ್ಯ ಉದ್ದೇಶ ಸಾಧನೆಗಾಗಿ ಚಾಸಾ-9 ರವರಿಗೆ "ಲೇ ಸಂಗ್ಯಾ ಕುರುಬ ಸೂಳೇಮಗನಾ ಇಲ್ಲಿ ಮೇವು ಕೀಳಬೇಡಾ ಅಂತಿಯಾ ರಂಡಿ ಮಗನಾ" ಅಂತಾ ಎಲ್ಲರೂ ಸೇರಿ ಬೈದು, ಪ್ರಾಣ ಬೆದರಿಕೆ ಹಾಕಿದ್ದು, ಅದರಂತೆ ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದಾಗಿ ಈ ನ್ಯಾಯಾಲಯ ಸಂಜ್ಞೆ ತೆಗೆದುಕೊಂಡಿದೆ.

ಈ ಎಲ್ಲಾ ಆಪಾದನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ, ಅವರು ಹೇಳಿದ ಹೇಳಿಕೆಗಳನ್ನು ಸ್ವತಃ ನಿಯಮಾನುಸಾರ ದಾಖಲಿಸದ್ದಾಗಿ ದೃಢಿಕರಿಸುತ್ತೇನೆ.

ದಿನಾಂಕಃ 09.09.2025.

**(ಕೆ. ರಾಜೇಶ ಕರ್ಣಮ್)**
IV ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ